2018 ಕ.ತೀ.ವ. 149

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅಬ್ದುಲ್ ನಜೀರ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆ ಮತ್ತು ಇತರರು
–ವಿರುದ್ಧ– ಶ್ರೀಮತಿ ಭಾರತಿ*

ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮ, 1961ರ 4ನೇ ಪ್ರಕರಣದ ಅಡಿಯಲ್ಲಿ ರಿಟ್ ಅಪೀಲು.

ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ 94ನೇ ಪ್ರಕರಣ

ಅಲ್ಪಸಂಖ್ಯಾತರ ಸಂಸ್ಥೆಗೆ ಶಿಕ್ಷಣ ಅಧಿನಿಯಮವು ಅದರ ನೌಕರರ ಸೇವಾ ನಿಯಮಗಳನ್ನು ನಿಯಂತ್ರಿಸುವ ಮಟ್ಟಿಗೆ ಅನ್ವಯಿಸುತ್ತದೆ. 1987ರ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮವು ಶಿಕ್ಷಕ ಅಥವಾ ಶಿಕ್ಷಕೇತರ ಸಿಬ್ಬಂದಿಯ ಸೇವಾ ನಿಯಮಗಳನ್ನು ನಿಯಂತ್ರಿಸುವ ಯಾವುದೇ ನಿಯಮ ಹೊಂದಿರುವುದಿಲ್ಲ. ಆದ್ದರಿಂದ ಎಲ್ಲಾ ತರಹದ ಶಿಕ್ಷಣ ಸಂಸ್ಥೆಗಳ ನೌಕರರ ಶಿಸ್ತು ಮತ್ತು ನಿಯಂತ್ರಣ ಕುರಿತು ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ 94ನೇ ಪ್ರಕರಣ ಮಾತ್ರ ಅನ್ವಯಿಸುತ್ತದೆ. ಆದ್ದರಿಂದ ಪ್ರತಿವಾದಿಯು ಶೈಕ್ಷಣಿಕ ಮೇಲ್ಮನವಿ ಪ್ರಾಧಿಕಾರದ ಎದುರು ಸಲ್ಲಿಸಿದ ಮೇಲ್ಮನವಿಯು ಮಾನ್ಯವಾಗುತ್ತದೆ.

*ರಿಟ್ ಅಪೀಲು ಸಂ.100667/2015 (ಎಸ್–ಆರ್ಇಎಸ್),
ದಿನಾಂಕ: 18ನೇ ಡಿಸೆಂಬರ್, 2015.

**ಶಿಕ್ಷಣ ಅಧಿನಿಯಮದ 94ನೇ ಪ್ರಕರಣವು ಕೇವಲ ನೌಕರರ ಸೇವಾ ನಿಯಮಗಳನ್ನು ನಿಯಂತ್ರಿಸುವ ಮಟ್ಟಿಗೆ ಅನ್ವಯಿಸುತ್ತದೆ. ಅದರ ಹೊರತು ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗೆ ಭಾರತ ಸಂವಿಧಾನದ ಅನುಚ್ಛೇದ 34ರಡಿ ನೀಡಿದ ಯಾವುದೇ ಅನುಕೂಲಗಳ ಕುರಿತು ಅನ್ವಯಿಸುವುದಿಲ್ಲ. ಈ ಕುರಿತು ಕರ್ನಾಟಕ ಶಿಕ್ಷಣ ಅಧಿನಿಯಮದ 141ನೇ ಪ್ರಕರಣದಲ್ಲಿ ವಿಶೇಷವಾಗಿ ಉಲ್ಲೇಖಿಸಲಾಗಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆಗಳು:*** | ***ಪ್ಯಾರಾಗಳಲ್ಲಿ*** |
|---|---|
| *1. 2002(8) ಎಸ್‌ಸಿಸಿ 481<br>ಟಿ.ಎಂ.ಎ.ಪೈ. ಫೌಂಡೇಷನ್ –ವಿರುದ್ಧ–<br>ಕರ್ನಾಟಕ ರಾಜ್ಯ* | *(ಉಲ್ಲೇ) 4* |
| *2. ಐಎಲ್‌ಆರ್ 2007, ಕರ್ನಾಟಕ 4870<br>ಡಿ. ಜೀವಗನ್ –ವಿರುದ್ಧ– ಪ್ರಾಂಶುಪಾಲರು<br>ಎಂಇಐ ಪಾಲಿಟೆಕ್ನಿಕ್ ಮತ್ತು ಇತರರು* | *(ಉಲ್ಲೇ) 10* |
| *3. 2015(1) ಕೆಸಿಸಿಆರ್ 324<br>ದಕ್ಷಿಣ ಭಾರತ ಹಿಂದಿ ಪ್ರಚಾರ<br>ಸಭಾ (ಕರ್ನಾಟಕ) ಪರವಾಗಿ<br>ಅದರ ಕಾರ್ಯದರ್ಶಿ, ಧಾರವಾಡ –ವಿರುದ್ಧ–<br>ಡಾ।। ಎ.ಎಸ್. ಗದಗ್* | *(ಉಲ್ಲೇ) 11* |
| *4. (1974) 1 ಎಸ್‌ಸಿಸಿ 717<br>ಅಹಮದಾಬಾದ್ ಸಂತ ಜೇವಿಯರ್<br>ಕಾಲೇಜು ಸೊಸೈಟಿ –ವಿರುದ್ಧ–<br>ಗುಜರಾತ್ ರಾಜ್ಯ* | *(ಉಲ್ಲೇ) 15* |
| *5. ಎಐಆರ್ 2007, ಎಸ್‌ಸಿ 570<br>ಕಾರ್ಯದರ್ಶಿ, ಮಾಲಂಕರ ಸಿರಿಯನ್<br>ಕ್ಯಾಥೋಲಿಕ್ ಕಾಲೇಜು –ವಿರುದ್ಧ–<br>ಟಿ. ಜೋಶಿ ಮತ್ತು ಇತರರು* | *(ಉಲ್ಲೇ) 17* |

ಅರ್ಜಿದಾರರ ಪರ : ಶ್ರೀ ಎಫ್.ವಿ. ಪಾಟೀಲ್ ವಕೀಲರ ಪರವಾಗಿ
ಶ್ರೀ ಎಸ್.ಎಸ್. ನಾಗಾನಂದ್, ಹಿರಿಯ ವಕೀಲರು;
ಪ್ರತ್ಯರ್ಜಿದಾರರ ಪರ : ಶ್ರೀ ಅನಂತ .ಪಿ ಸವದಿ, ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್:**

ಶಿಕ್ಷಣ ಅಪೀಲು ನ್ಯಾಯಾಧಿಕರಣ, ಧಾರವಾಡ ದಿನಾಂಕ 12.1.2015ರಂದು ಎಂ.ಎ. (ಇಎಟಿ) ಸಂ.4/2012ರಲ್ಲಿನ ಆದೇಶವನ್ನು, ಮಾನ್ಯ ಏಕ ನ್ಯಾಯಾಧೀಶರು ದಿನಾಂಕ 15.9.2015 ರಂದು ರಿಟ್ ಅರ್ಜಿ ಸಂ.102172/2015ರಲ್ಲಿ ಸ್ಥಿರೀಕರಿಸಿದ ಆದೇಶದ ವಿರುದ್ಧ ನಿರ್ದೇಶಿಸಲು ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮ 1961ರ 4ನೇ ಪ್ರಕರಣದ ಅಡಿಯಲ್ಲಿ ಈ ಅಂತರ ನ್ಯಾಯಾಲಯ ಅಪೀಲನ್ನು ಸಲ್ಲಿಸಲಾಗಿದೆ.

2. ಮೊದಲನೇ ಅಪೀಲುದಾರರು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಅಡಿಯಲ್ಲಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆಯಾಗಿರುತ್ತದೆ. ಎರಡನೇ ಅಪೀಲುದಾರ ಸಂಸ್ಥೆಯು ಮೊದಲನೇ ಅಪೀಲುದಾರ – ಸಂಸ್ಥೆಯ ಘಟಕವಾಗಿದೆ ಮತ್ತು ಮೂರನೇ ಅಪೀಲುದಾರ ಇಂಜಿನಿಯರಿಂಗ್ ಕಾಲೇಜು ಅಪೀಲುದಾರ ಸಂಸ್ಥೆ 1 ಮತ್ತು 2ರ ಮೂಲಕ ಸ್ಥಾಪಿತವಾಗಿದೆ.

3. ಪ್ರತ್ಯರ್ಜಿದಾರರನ್ನು, 1ನೇ ಅಪೀಲುದಾರ – ಸಂಸ್ಥೆಯು ಸಹಾಯಕ ಗ್ರಂಥ ಪಾಲಕರಾಗಿ 1999ರಲ್ಲಿ ಮೂರನೇ ಅಪೀಲುದಾರ ಕಾಲೇಜಿನಲ್ಲಿ ನೇಮಕ ಮಾಡಿರುತ್ತದೆ. ಪ್ರತ್ಯರ್ಜಿದಾರರ ಸೇವೆಯನ್ನು ದಿನಾಂಕ 21.2.2013ರ ಆದೇಶದಲ್ಲಿ ವಜಾಗೊಳಿಸಿರುತ್ತದೆ. ಪ್ರತ್ಯರ್ಜಿದಾರರು, ಸದರಿ ಆದೇಶವನ್ನು ಪ್ರಧಾನ ಜಿಲ್ಲಾ

ಮತ್ತು ಸತ್ರ ನ್ಯಾಯಾಧೀಶರು ಹಾಗೂ ಶಿಕ್ಷಣ ಅಪೀಲು ನ್ಯಾಯಾಧೀಕರಣ, ಧಾರವಾಡ (ಸಂಕ್ಷಿಪ್ತವಾಗಿ ನ್ಯಾಯಾಧಿಕರಣ) ಇವರ ಮುಂದೆ ಎಂ.ಎ. (ಇಎಟಿ) ಸಂ.4/2012ರಲ್ಲಿ ಪ್ರಶ್ನಿಸಿದ್ದರು. ಇತರ ವಿಷಯಗಳೊಂದಿಗೆ ಸದರಿ ಅಪೀಲನ್ನು ಪುರಸ್ಕರಿಸುವುದಕ್ಕೆ ನ್ಯಾಯಾಧಿಕರಣಕ್ಕೆ ಅಧಿಕಾರ ವ್ಯಾಪ್ತಿ ಇರುವುದಿಲ್ಲವೆಂದು ಅಪೀಲುದಾರರು ಸದರಿ ಅಪೀಲನ್ನು ಪ್ರತಿರೋಧಿಸಿದ್ದರು ಮತ್ತು ಸದರಿ ವಿವಾದಾಂಶವನ್ನು ದಿನಾಂಕ 12.1.2015ರ ಆದೇಶದ ಮೂಲಕ ತಳ್ಳಿಹಾಕಲಾಗಿತ್ತು. ಅದನ್ನು ಮತ್ತೂ ಪ್ರಶ್ನಿಸಲಾಗಿ ನ್ಯಾಯಾಧಿಕರಣದ ಆದೇಶವನ್ನು ಮಾನ್ಯ ಏಕ ನ್ಯಾಯಾಧೀಶರು ಸ್ಥಿರೀಕರಿಸಿದರು, ಅದನ್ನು ಪ್ರಶ್ನಿಸಿ ಈ ಅಪೀಲನ್ನು ದಾಖಲಿಸಲಾಗಿದೆ.

4. ಅಪೀಲುದಾರರ ಪರವಾಗಿ ಶ್ರೀ ಎಸ್.ಎಸ್. ನಾಗನಂದ್, ಮಾನ್ಯ ಹಿರಿಯ ನ್ಯಾಯಾವಾದಿಗಳು ಹಾಜರಾಗಿ, ಕರ್ನಾಟಕ ಶಿಕ್ಷಣ ಅಧಿನಿಯಮ, 1983 (ಸಂಕ್ಷಿಪ್ತವಾಗಿ ಶಿಕ್ಷಣ ಅಧಿನಿಯಮ)ರ 94ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿದ ಅಪೀಲನ್ನು ಸ್ವೀಕರಿಸಲು ನ್ಯಾಯಾಧಿಕರಣಕ್ಕೆ ಅಧಿಕಾರ ವ್ಯಾಪ್ತಿ ಇಲ್ಲ ಎಂದು ತಮ್ಮ ವಾದದಲ್ಲಿ ನಿವೇದಿಸಿರುವರು. 3ನೇ ಅಪೀಲುದಾರರ ನೌಕರರ ಸೇವಾ ಷರತ್ತುಗಳಿಗೆ ಸಂಬಂಧಿಸಿದ ವಿಷಯವನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987 (ಸಂಕ್ಷಿಪ್ತವಾಗಿ 'ಅಭಾತಾಶಿಪ ಅಧಿನಿಯಮ') ನಿರ್ವಹಿಸುತ್ತದೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮವು ನಿರ್ವಹಿಸುವ ವ್ಯಾಪ್ತಿಗೆ ಸೇರುವ ಕಾಲೇಜುಗಳನ್ನು ಮತ್ತು ಸಂಸ್ಥೆಗಳನ್ನು ಶಿಕ್ಷಣ ಅಧಿನಿಯಮದಿಂದ ಬಿಟ್ಟು ಬಿಡಲಾಗಿದೆ. ಆದುದರಿಂದ, ನ್ಯಾಯಾಧಿಕರಣ ಅಪೀಲನ್ನು ಸ್ವೀಕರಿಸಿರುವುದು ಸಮರ್ಥನೀಯವಾಗಿರುವುದಿಲ್ಲ. ಪರ್ಯಾಯವಾಗಿ, ಅದು 3ನೇ ಅಪೀಲುದಾರ ಸಂಸ್ಥೆಯೂ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯಾಗಿದೆ ಎಂದು ವಾದಿಸಿದ್ದಾರೆ. ಶಿಕ್ಷಣ ಅಧಿನಿಯಮದ 94ನೇ ಪ್ರಕರಣವು ಅಲ್ಪಸಂಖ್ಯಾತರು ತಮ್ಮ ಆಯ್ಕೆಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ನಿರ್ವಹಿಸುವುದಕ್ಕೆ ಅಲ್ಪಸಂಖ್ಯಾತರ ಹಕ್ಕುಗಳಲ್ಲಿ ಇವು ಹಸ್ತಕ್ಷೇಪ ಮಾಡುವುದರಿಂದ ಈ ಸಂಬಂಧದಲ್ಲಿ, ಅದು ಅನ್ವಯವಾಗುವುದಿಲ್ಲ. ಈ ಸಂಬಂಧದಲ್ಲಿ, ಸದರಿ ಮೊಕದ್ದಮೆಗೆ ಅವಲಂಬನೆಯಾಗಿ

ಸರ್ವೋಚ್ಚ ನ್ಯಾಯಾಲಯವು ***ಟಿ.ಎಂ.ಎ.ಪೈ. ಫೌಂಡೇಷನ್ –ವಿರುದ್ಧ– ಕರ್ನಾಟಕ ರಾಜ್ಯ***[1] ಮೊಕದ್ದಮೆಯಲ್ಲಿ ನೀಡಿದ ನಿರ್ಣಯವನ್ನು ಮಂಡಿಸಲಾಗಿದೆ.

5. ಮತ್ತೊಂದು ಕಡೆಯಲ್ಲಿ, ಶ್ರೀ ಅನಂತ ಪಿ. ಸವದಿ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಹಾಜರಾಗಿ ಶಿಕ್ಷಣ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಮಾತ್ರವೇ ಪ್ರತ್ಯರ್ಜಿದಾರರ ಕುಂದುಕೊರತೆಯನ್ನು ಪರಿಹಾರ ಮಾಡಲು ಸಾಧ್ಯವೆಂದು ನಿವೇದಿಸಿರುವರು. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮದ ಅನ್ವಯಿಕತೆಯು ಪರಿಮಿತವಾಗಿದೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮದ ವ್ಯಾಪ್ತಿಗೆ ಒಳಪಡುವ ವಿಷಯಗಳಾವುವು ಎಂದರೆ ಶಿಕ್ಷಕರ ವಿದ್ಯಾರ್ಹತೆ ಅವರ ವೇತನ ಶ್ರೇಣಿಗಳು, ವಿದ್ಯಾರ್ಥಿ ಶಿಕ್ಷಕರ ಅನುಪಾತ, ತಾಂತ್ರಿಕ ಸಂಸ್ಥೆಯಲ್ಲಿನ ಮೂಲ ಸೌಕರ್ಯಗಳು ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮದಲ್ಲಿ ನಮೂದಿಸಿದ ಅಂಥ ಇತರ ವಿಷಯಗಳು ಮಾತ್ರವೇ ಅದರ ವ್ಯಾಪ್ತಿಯೊಳಗೆ ಬರುತ್ತವೆ. ಯಾವುದೇ ಸಂದರ್ಭದಲ್ಲೂ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮವು ನೌಕರರ ಮತ್ತು ಸಂಸ್ಥೆಯ ಆಡಳಿತದ ನಡುವಿನ ವಿವಾದಗಳನ್ನು, ನಿರ್ಣಯಿಸಲು ನೌಕರರ ಸಂಬಂಧದಲ್ಲಿನ ವಜಾ ಮಾಡುವ ತೆಗೆದು ಹಾಕುವ ಅಥವಾ ದರ್ಜೆಯನ್ನು ಇಳಿಸುವಂತಹ, ಇತ್ಯಾದಿ ಶಿಸ್ತು ಕ್ರಮ ಕೈಗೊಳ್ಳುವ ನಿರ್ಣಯಿಸುವ ಬಗ್ಗೆ ಈ ಅಧಿನಿಯಮವು ಯಾವುದೇ ಉಪಬಂಧವನ್ನು ಒಳಗೊಂಡಿರುವುದಿಲ್ಲ. ಆದುದರಿಂದ, ಪ್ರತ್ಯರ್ಜಿದಾರರು ಶಿಕ್ಷಣದ ಅಧಿನಿಯಮದ 94ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿರುವ ಅಪೀಲು ಊರ್ಜಿತ ಯೋಗ್ಯವಾದುದು ಎಂದು ನಿವೇದಿಸಿದ್ದಾರೆ. ತಮ್ಮ ವಾದವನ್ನು ಮುಂದುವರೆಸುತ್ತಾ, ತನ್ನ ನೌಕರರ ಸೇವಾ ಷರತ್ತುಗಳನ್ನು ವಿನಿಯಮಿಸುವ ಸಂದರ್ಭದಲ್ಲಿ ಅಲ್ಪಸಂಖ್ಯಾತ ಸಂಸ್ಥೆಗಳಿಗೂ ಸಹಾ ಶಿಕ್ಷಣ ಅಧಿನಿಯಮ ಸಮಾನವಾಗಿ ಅನ್ವಯವಾಗುತ್ತದೆ ಎಂದು ನ್ಯಾಯವಾದಿಗಳು ತಮ್ಮ ವಾದದಲ್ಲಿ ನಿವೇದಿಸಿರುವರು. ಶಿಕ್ಷಣ ಅಧಿನಿಯಮವು ಸಂಸ್ಥೆಯ ಆಡಳಿತದ ಮೇಲೆ ಮತ್ತು ಆಡಳಿತ ಮಂಡಲಿಯ

1. 2002(8) ಎಸ್‌ಸಿಸಿ 481

ನಿಯಂತ್ರಣ ಮೇಲೆ ಮತ್ತು ಅಲ್ಲಿನ ಸಿಬ್ಬಂದಿಯ ಮೇಲೆ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಶಿಕ್ಷಣ ಅಧಿನಿಯಮವು ಯಾವುದೇ ರೀತಿಯಲ್ಲಿ ಸಂಸ್ಥೆಯ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ. ಆದುದರಿಂದ, ಅಪೀಲುದಾರರು ಶಿಕ್ಷಣ ಅಧಿನಿಯಮದ ಅನ್ವಯಿಕತೆಯಿಂದ ಅಲ್ಪಸಂಖ್ಯಾತ ಸಂಸ್ಥೆಗಳು ದೂರವಿರುತ್ತವೆ ಎಂಬ ತಪ್ಪು ತಿಳುವಳಿಕೆಯ ವಾದವನ್ನು ಈಗಾಗಲೇ ಮಂಡಿಸಿದ್ದಾರೆ ಎಂದು ನಿವೇದಿಸಿರುವರು. ಈ ಎಲ್ಲ ಕಾರಣದಿಂದ ಅಪೀಲನ್ನು ವಜಾ ಮಾಡಬೇಕೆಂದು ತಮ್ಮ ವಾದದಲ್ಲಿ ಪ್ರಾರ್ಥಿಸಿರುವರು.

6. ಈ ಎಲ್ಲ ವಾದಾಂಶಗಳ ಸಂಬಂಧದಲ್ಲಿ, ನಾವು ಇಲ್ಲಿ ಪರಿಗಣಿಸಬೇಕಾದ ಮೊದಲ ಪ್ರಶ್ನೆ ಯಾವುದೆಂದರೆ, ಶಿಕ್ಷಣ ಅಧಿನಿಯಮ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮದ ಉಪಬಂಧದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾಲೇಜುಗಳು ಮತ್ತು ಸಂಸ್ಥೆಗಳನ್ನು ಹೊರತುಪಡಿಸಿದೆ? ಎಂಬ ಪ್ರಶ್ನೆಯನ್ನು ಪ್ರಧಾನವಾಗಿ ಪರಿಗಣಿಸಬೇಕಾಗಿದೆ.

7. ಮೇಲೆ ಗಮನಿಸಿದಂತೆ, ಅಪೀಲುದಾರರು ಹೊರಡಿಸಿದ ವಜಾ ಮಾಡಿದ ಆದೇಶವನ್ನು ಪ್ರಶ್ನಿಸಿ ಶಿಕ್ಷಣ ಅಧಿನಿಯಮದ 94ನೇ ಪ್ರಕರಣದ ಅಡಿಯಲ್ಲಿ ಪ್ರತ್ಯರ್ಜಿದಾರರು ಅಪೀಲನ್ನು ದಾಖಲಿಸಿರುವರು. ಖಾಸಗಿ ಶೈಕ್ಷಣಿಕ ಸಂಸ್ಥೆಯು ಯಾರೇ ಶಿಕ್ಷಕ ಅಥವಾ ಇತರ ನೌಕರರನ್ನು ವಜಾ ಮಾಡಿದ್ದರೆ, ತೆಗೆದು ಹಾಕಿದ್ದರೆ ಅಥವಾ ದರ್ಜೆಯನ್ನು ಕೆಳಗಿಳಿಸಿದ್ದರೆ, ಆ ಯಾರೇ ಶಿಕ್ಷಕ ಅಥವಾ ಇತರ ನೌಕರರು ಅಪೀಲನ್ನು ದಾಖಲಿಸಲು ಶಿಕ್ಷಣ ಅಧಿನಿಯಮದ 94ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಪಬಂಧಿಸಿದೆ. ಸದರಿ ಉಪಬಂಧವು ಈ ಕೆಳಗಿನಂತಿದೆ:

> "**94. ಅಪೀಲುಗಳು**.– (1) ವಜಾ ಮಾಡಲಾದ, ತೆಗೆದುಹಾಕಲಾದ ಅಥವಾ ಕೆಳದರ್ಜೆಗೆ ಇಳಿಸಲಾದ ಖಾಸಗಿ ಶಿಕ್ಷಣ ಸಂಸ್ಥೆಯ ಯಾವನೇ ಶಿಕ್ಷಕನು ಅಥವಾ ಇತರ ನೌಕರನು

ಆ ಆದೇಶವನ್ನು ಆತನಿಗೆ ತಿಳಿಸಿದ ಮೂರು ತಿಂಗಳ ಒಳಗಾಗಿ ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದು.

7.1. 2ನೇ ಪ್ರಕರಣದ (14)ನೇ ಉಪಪ್ರಕರಣದಲ್ಲಿ 'ಶೈಕ್ಷಣಿಕ ಸಂಸ್ಥೆ' ಎಂಬ ಅಭಿವ್ಯಕ್ತಿಯನ್ನು ಪರಿಭಾಷಿಸಲಾಗಿದೆ. 3ನೇ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಶಿಕ್ಷಣಕ್ಕೆ ಸಂಬಂಧಿಸಿದ ಯಾವುದೇ ಸಂಸ್ಥೆ ಎಂದರೆ, ಖಾಸಗೀ ಶೈಕ್ಷಣಿಕ ಸಂಸ್ಥೆಗಳನ್ನು ಒಳಗೊಳ್ಳುವ ಆದರೆ ವಿಶ್ವವಿದ್ಯಾಲಯ ಅಥವಾ ಕೇಂದ್ರ ಸರ್ಕಾರ ಅಥವಾ ಟ್ಯುಟೋರಿಯಲ್ ಸಂಸ್ಥೆಗಳಿಂದ ನೇರವಾಗಿ ನಿರ್ವಹಿಸುತ್ತಿರುವ ಸಂಸ್ಥೆಗಳನ್ನು ಒಳಗೊಳ್ಳದ ಸಂಸ್ಥೆಗಳು ಎಂದರ್ಥ.

7.2. ಅಧಿನಿಯಮದ 2ನೇ ಪ್ರಕರಣದ (15)ನೇ ಉಪಪ್ರಕರಣದ ಅಡಿಯಲ್ಲಿ 'ನೌಕರ' ಎಂಬ ಅಭಿವ್ಯಕ್ತಿಯನ್ನು ಪರಿಭಾಷಿಸಲಾಗಿದೆ. ನೌಕರ ಎಂದರೆ ಶೈಕ್ಷಣಿಕ ಸಂಸ್ಥೆಯಲ್ಲಿ ನಿಯೋಜಿತಗೊಂಡ ವ್ಯಕ್ತಿ ಎಂದು ಪರಿಭಾಷಿಸಿದೆ.

7.3. 'ಖಾಸಗೀ ಶೈಕ್ಷಣಿಕ ಸಂಸ್ಥೆ' ಅಭಿವ್ಯಕ್ತಿಯನ್ನು 2ನೇ ಪ್ರಕರಣದ (27)ನೇ ಉಪಪ್ರಕರಣದಲ್ಲಿ ಈ ಕೆಳಗಿನಂತೆ ಪರಿಭಾಷಿಸಲಾಗಿದೆ:

> "ಖಾಸಗಿ ಶಿಕ್ಷಣ ಸಂಸ್ಥೆ" ಎಂದರೆ, ಯಾರೇ ವ್ಯಕ್ತಿಯು ಅಥವಾ ವ್ಯಕ್ತಿಗಳ ನಿಕಾಯವು ಸ್ಥಾಪಿಸಿದ ಮತ್ತು ಆಡಳಿತ ನಡೆಸುವ ಅಥವಾ ನಿರ್ವಹಿಸಿಕೊಂಡು ಬರುವ ಮತ್ತು 3ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಶಿಕ್ಷಣವನ್ನು ನೀಡುವ ಯಾವುದೇ ಶಿಕ್ಷಣ ಸಂಸ್ಥೆ, ಆದರೆ ಇದರಲ್ಲಿ,-
>
> (ಎ) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ

ಅಥವಾ ಪ್ರಾಯೋಜಿಸಿದ ಯಾವುದೇ ಇತರ ಪ್ರಾಧಿಕಾರವು ಸ್ಥಾಪಿಸಿದ, ಆಡಳಿತ ನಡೆಸುವ ಮತ್ತು ನಿರ್ವಹಿಸುವ ಶಿಕ್ಷಣ ಸಂಸ್ಥೆ;

(ಬಿ) ಕಾನೂನಿನ ಮೂಲಕ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾಲಯವು ಸ್ಥಾಪಿಸಿದ ಮತ್ತು ಆಡಳಿತ ನಡೆಸುವ ಶಿಕ್ಷಣ ಸಂಸ್ಥೆ;

(ಸಿ) ಯಾವುದೇ ಇತರ ಶಿಕ್ಷಣವನ್ನು ನೀಡದೆ, ಧಾರ್ಮಿಕ ಬೋಧನೆಯನ್ನು ಮಾತ್ರವೇ ಕೊಡುವ, ಒದಗಿಸುವ ಅಥವಾ ನೀಡುವ ಶಿಕ್ಷಣ ಸಂಸ್ಥೆ;

(ಡಿ) ಅನುಮೋದಿತ ಪಠ್ಯ ವಿಷಯ ಅಥವಾ ವ್ಯಾಸಂಗ ಕ್ರಮ ಅಥವಾ ಸರ್ಕಾರದ ಇಲ್ಲವೇ ವಿಶ್ವವಿದ್ಯಾಲಯದ ಪರೀಕ್ಷೆಗಳಿಲ್ಲದ ಶಿಕ್ಷಣವನ್ನು ನೀಡುವ ಶಿಕ್ಷಣ ಸಂಸ್ಥೆಗಳು –ಇದರಲ್ಲಿ ಒಳಗೊಳ್ಳುವುದಿಲ್ಲ;

8. ಅಪೀಲುದಾರ / ಕಾಲೇಜು ಖಾಸಗಿ ಶೈಕ್ಷಣಿಕ ಸಂಸ್ಥೆಯಾಗಿದ್ದು ಅದು ಶಿಕ್ಷಣ ಅಧಿನಿಯಮದ 2ನೇ ಪ್ರಕರಣದ (27)ನೇ ಉಪಪ್ರಕರಣದಲ್ಲಿ ಪರಿಭಾಷಿಸಿರುವ ವ್ಯಾಪ್ತಿಯೊಳಗೆ ಬರುತ್ತದೆಂಬುದರಲ್ಲಿ ಯಾವುದೇ ವಿವಾದವಿಲ್ಲ. ಸದರಿ ಅಧಿನಿಯಮದ 1ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ ಹೇಳಲಾದಂತೆ, ಅಧಿನಿಯಮದ 1ನೇ ಪ್ರಕರಣದ (3)ನೇ ಉಪ ಪ್ರಕರಣದ (1) ರಿಂದ (5) ಖಂಡಗಳಲ್ಲಿ ಒಳಗೊಂಡ ಶಿಕ್ಷಣ ಸಂಸ್ಥೆಗಳನ್ನು ಹೊರತುಪಡಿಸಿ ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಗೆ ಮತ್ತು ಟ್ಯುಟೋರಿಯಲ್ ಸಂಸ್ಥೆಗಳಿಗೆ ಸದರಿ ಅಧಿನಿಯಮವು ಅನ್ವಯವಾಗುತ್ತದೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮದೊಳಗೆ ಬರುವ ಕಾಲೇಜುಗಳನ್ನು ಮತ್ತು ಸಂಸ್ಥೆಗಳನ್ನು ಅಧಿನಿಯಮದ

(1)ನೇ (iv) (ಡಿ–ಎ)ಯ ಪ್ರಕರಣದಲ್ಲಿ ಬಿಟ್ಟು ಬಿಡಲಾಗಿದೆ. ಸದರಿ ಉಪಬಂಧವು ಈ ಕೆಳಗಿನಂತಿದೆ:

**1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ.–**

(1) ಈ ಅಧಿನಿಯುಮವನ್ನು ಕರ್ನಾಟಕ ಶಿಕ್ಷಣ ಅಧಿನಿಯಮ, 1983 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೆಳಕಂಡವುಗಳನ್ನು ಹೊರತುಪಡಿಸಿ ರಾಜ್ಯದಲ್ಲಿರುವ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ಮತ್ತು ಟ್ಯುಟೋರಿಯಲ್ ಸಂಸ್ಥೆಗಳಿಗೆ ಅನ್ವಯವಾಗತಕ್ಕುದು:-

(i) ಯಿಂದ (iii-ಎ) .............

(iv) ಯಾವ ಕಾಲೇಜುಗಳಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಈ ಕೆಳಕಂಡ ಅಧಿನಿಯಮಗಳ ವ್ಯಾಪ್ತಿಯೊಳಗೆ ವ್ಯವಹರಿಸಲಾಗುವಷ್ಟರ ಮಟ್ಟಿಗೆ ಅಂಥ ಕಾಲೇಜುಗಳು ಮತ್ತು ಶಿಕ್ಷಣ ಸಂಸ್ಥೆಗಳು,-

(ಎ) ಯಿಂದ (ಡಿ) .................

(ಡಿಎ) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987 (1987ರ ಕೇಂದ್ರ ಅಧಿನಿಯಮ ಸಂಖ್ಯೆ 52);

(ಇ) ........................

(ಎಫ್) ....................

(v) ..........................

9. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮವು, ತಾಂತ್ರಿಕ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕಾಗಿ, ಅನುಮೋದನೆ ನೀಡಲು ಇರುವ ಷರತ್ತುಗಳನ್ನು ಮತ್ತು ಮಾನದಂಡಗಳನ್ನು ಹಾಗೂ ವಿದ್ಯಾರ್ಥಿಗಳ ಪ್ರವೇಶಾತಿಯ ಮಾರ್ಗಸೂಚಿಗಳನ್ನು ಮತ್ತು ಶುಲ್ಕಗಳ ವಿವರಗಳನ್ನು, ನಿಯಮಿಸುವುದು, ಸಂಸ್ಥೆಗಳು ಏಕ ರೂಪ ಮಾನದಂಡಗಳನ್ನು ನಿರ್ವಹಿಸುತ್ತಿರುವ ಬಗ್ಗೆ ನಿಯತಕಾಲಿಕವಾಗಿ ಸಂಸ್ಥೆಗಳನ್ನು ಪರಿಶೀಲಿಸುವುದಕ್ಕಾಗಿ ಮತ್ತು ಮೌಲ್ಯಮಾಪನ ಮಾಡುವ ಕಾರ್ಯಕ್ರಮಗಳನ್ನು ಅಧಿನಿಯಮದಲ್ಲಿ ಉಪಬಂಧಿಸಿದೆ. ಭಾರತದಲ್ಲಿ ತಾಂತ್ರಿಕ ಶಿಕ್ಷಣಕ್ಕಾಗಿ 'ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು' ನಿಕಾಯವು ಉನ್ನತ ನಿಯಂತ್ರಕ ನಿಕಾಯವಾಗಿದೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ನಿಯಮಿಸಿದ ಮಾನದಂಡಗಳನ್ನು ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಪಾಲನೆ ಮಾಡಲು ವಿಫಲವಾದ ಸಂದರ್ಭದಲ್ಲಿ ಸಂಸ್ಥೆಗೆ ಮಾನ್ಯತೆ ನೀಡುವ ಅಥವಾ ಮಾನ್ಯತೆಯನ್ನು ತಡೆಹಿಡಿಯುವ ಅಧಿಕಾರವು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ನಿಕಾಯದಲ್ಲಿ ನಿಹಿತಗೊಂಡಿರುತ್ತದೆ. ಈ ನಿಕಾಯವು ಅಂಥ ತಾಂತ್ರಿಕ ಸಂಸ್ಥೆಯಲ್ಲಿ ಅಥವಾ ಯಾವುದೇ ಕಾಲೇಜಿನಲ್ಲಿ ಅಥವಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಅಥವಾ ಬೋಧಕೇತರ ಸಿಬ್ಬಂದಿಯ ಸೇವಾ ಷರತ್ತುಗಳನ್ನು ವ್ಯವಹರಿಸುವುದಕ್ಕೆ ಸಿಬ್ಬಂದಿಯ ವಿರುದ್ಧ ಸಂಬಂಧಪಟ್ಟ ಶಿಸ್ತು ಕ್ರಮಗಳನ್ನು ಕೈಗೊಳ್ಳುವ ವಿಷಯಗಳ ಸಂಬಂಧದಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನಲ್ಲಿ ಉಪಬಂಧಿಸಿರುವುದಿಲ್ಲ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮದ ಅನನ್ಯ ವ್ಯಾಪ್ತಿಯೊಳಗೆ ಬರುವ ವಸ್ತು ವಿಷಯಗಳಷ್ಟರ ಮಟ್ಟಿಗೆ ಕಾರ್ಯನಿರ್ವಹಿಸುತ್ತಿರುವ

ಸಂಸ್ಥೆಗಳಿಗೆ ಶಿಕ್ಷಣ ಅಧಿನಿಯಮವು ಅನ್ವಯವಾಗುವುದಿಲ್ಲ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ ಅಡಿಯಲ್ಲಿನ ಕಾಲೇಜುಗಳ ಮತ್ತು ಸಂಸ್ಥೆಗಳ ನೌಕರರ ಸಂಬಂಧದಲ್ಲಿ ಶಿಸ್ತು ಮತ್ತು ನಿಯಂತ್ರಣವನ್ನು ನಿರ್ವಹಿಸುವುದಕ್ಕೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮವು ಯಾವುದೇ ಉಪಬಂಧವನ್ನು ಒಳಗೊಂಡಿಲ್ಲದೆ ಇರುವುದರಿಂದ ಶಿಕ್ಷಣ ಅಧಿನಿಯಮದ ಅಡಿಯಲ್ಲಿ ಎಲ್ಲಾ ಶಿಕ್ಷಣ ಸಂಸ್ಥೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಬ್ಬರ ವಿರುದ್ಧ ಸಂಬಂಧಪಟ್ಟ ಶಿಸ್ತು ಕ್ರಮ ಕೈಗೊಳ್ಳುವ ಎಲ್ಲ ವಿಷಯಗಳನ್ನು ಶಿಕ್ಷಣ ಅಧಿನಿಯಮ ಮಾತ್ರವೇ ನಿರ್ವಹಿಸುತ್ತದೆ.

10. ಈ ನ್ಯಾಯಾಲಯದ ವಿಭಾಗೀಯ ಪೀಠ ಇಂತಹದೇ ಮೊಕದ್ದಮೆಯಾದ ***ಡಿ. ಜೀವಗನ್ -ವಿರುದ್ಧ- ಪ್ರಾಂಶುಪಾಲರು ಎಂಇಐ ಪಾಲಿಟೆಕ್ನಿಕ್ ಮತ್ತು ಇತರರು*** [2] ಮೊಕದ್ದಮೆಯಲ್ಲಿ ನೀಡಿದ ತೀರ್ಪು ಹೀಗಿದೆ:

> "ಮಾನ್ಯ ಸರ್ಕಾರಿ ವಕೀಲರು ಪ್ರಾಸಂಗಿಕವಾಗಿ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ 1987ರ ಉಪಬಂಧಗಳ ಮೂಲಕ ಕಾರ್ಯನಿರ್ವಹಿಸುತ್ತಿರುವ ಎಂಇಐ ಪಾಲಿಟೆಕ್ನಿಕ್‌ನಂತಹ ಆ ಯಾವುದೇ ಸಂಸ್ಥೆಗಳಿಗೆ ಕರ್ನಾಟಕ ಶಿಕ್ಷಣ ಅಧಿನಿಯಮದ ಉಪಬಂಧಗಳು ಅನ್ವಯವಾಗುವುದರ ಬಗ್ಗೆ ಸಂದೇಹವನ್ನು ವ್ಯಕ್ತಪಡಿಸಿರುವರು. ಕರ್ನಾಟಕ ಶಿಕ್ಷಣ ಅಧಿನಿಯಮ 1983ರ 1(3)(iv)(ಡಿ-ಎ) ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳ ದೃಷ್ಟಿಯಲ್ಲಿ ಈ ಸಂದೇಹವು ಉಂಟಾಗಿರುತ್ತದೆ. 1(3)(iv) (ಡಿ-ಎ) ಪ್ರಕರಣಕ್ಕೆ ಅನುಸಾರವಾಗಿ, ಕರ್ನಾಟಕ ರಾಜ್ಯದ ಎಲ್ಲ ಶೈಕ್ಷಣಿಕ ಸಂಸ್ಥೆಗಳಿಗೆ ಮತ್ತು ಟ್ಯೂಟೋರಿಯಲ್ ಸಂಸ್ಥೆಗಳಿಗೆ ಇದು ಅನ್ವಯವಾಗುತ್ತದೆ. ಶಿಕ್ಷಣ ಅಧಿನಿಯಮದೊಳಗೆ ವ್ಯವಹರಿಸುವ

2. ಐಎಲ್‌ಆರ್ 2007, ಕರ್ನಾಟಕ 4870

ಕಾಲೇಜುಗಳಿಗೆ ಮತ್ತು ಸಂಸ್ಥೆಗಳಿಗೆ ಸೇರಿದ ವಿಷಯಗಳ ಅಷ್ಟರಮಟ್ಟಿಗೆ ಹೊರತುಪಡಿಸಿ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮದೊಳಗೆ ವ್ಯವಹರಿಸುವ ಆ ಯಾವುದೇ ವಿಷಯಗಳಷ್ಟರ ಮಟ್ಟಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮದ ಉಪಬಂಧಗಳ ಮೂಲಕ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಶಿಕ್ಷಣ ಅಧಿನಿಯಮ ಅನ್ವಯವಾಗುವುದಿಲ್ಲ. ನೌಕರರು ಮತ್ತು ಸಂಸ್ಥೆಯ ಆಡಳಿತ ಮಂಡಲಿಯ ನಡುವೆ ನೌಕರರ ಸಂಬಂಧದಲ್ಲಿ ಆಡಳಿತ ಮಂಡಲಿ ವಜಾ ಮಾಡುವ, ತೆಗೆದು ಹಾಕುವ ಅಥವಾ ದರ್ಜೆಯನ್ನು ಇಳಿಸುವ ಆ ಯಾವುದೇ ನಿರ್ಣಯವನ್ನು ಮಾಡುವುದಕ್ಕಾಗಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮವು ಯಾವುದೇ ಉಪಬಂಧವನ್ನು ಒಳಗೊಂಡಿಲ್ಲ ಎಂಬುದರಲ್ಲಿ ಯಾವುದೇ ವಿವಾದ ಇರುವುದಿಲ್ಲ. ಆದುದರಿಂದ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮದ ಉಪಬಂಧಗಳು ಒಳಗೊಂಡಿದ್ದಾಗ್ಯೂ ಪ್ರತ್ಯರ್ಜಿದಾರ ಸಂಸ್ಥೆಗೆ ಕರ್ನಾಟಕ ಶಿಕ್ಷಣ ಅಧಿನಿಯಮದ 94ನೇ ಪ್ರಕರಣವು ಅನ್ವಯವಾಗುತ್ತದೆ.

(ನಮ್ಮಿಂದ ಒತ್ತು ನೀಡಲಾಗಿದೆ)

11. ಈ ನ್ಯಾಯಾಲಯದ ವಿಭಾಗೀಯ ಪೀಠ, ***ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ (ಕರ್ನಾಟಕ) ಪರವಾಗಿ ಅದರ ಕಾರ್ಯದರ್ಶಿ, ಧಾರವಾಡ –ವಿರುದ್ಧ– ಡಾ॥ ಎ.ಎಸ್. ಗದಗ್***[3] – ಈ ಮೊಕದ್ದಮೆಯಲ್ಲಿ ಪುನಃ ಹೇಳಲಾದ ಕಾನೂನಿನ ಸ್ಥಾನವು ಈ ಮುಂದಿನಂತಿದೆ:

"10. ಕರ್ನಾಟಕ ಶಿಕ್ಷಣ ಅಧಿನಿಯಮದ (1)ನೇ ಪ್ರಕರಣದ (3)ನೇ ಉಪಪ್ರಕರಣದ ವಿವರಣೆಗಳಲ್ಲಿ (i) ರಿಂದ (v)ನೇ

3. 2015(1) ಕೆಸಿಸಿಆರ್ 324

ಖಂಡದಲ್ಲಿ ನಮೂದಿಸಿದ ಸಂಸ್ಥೆಗಳನ್ನು ಹೊರತುಪಡಿಸಿ ರಾಜ್ಯದಲ್ಲಿರುವ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಗೆ ಮತ್ತು ಟ್ಯುಟೋರಿಯಲ್ ಸಂಸ್ಥೆಗಳಿಗೆ 'ಅದು' ಅನ್ವಯವಾಗುತ್ತದೆ. (iv) ಖಂಡಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಕರ್ನಾಟಕ ಶಿಕ್ಷಣ ಅಧಿನಿಯಮವನ್ನು ಹೊರತುಪಡಿಸಿ, ಅಧಿನಿಯಮಗಳ ಉಪಬಂಧಗಳಲ್ಲಿ 'ವ್ಯವಹರಿಸುತ್ತಿರುವ' ಕಾಲೇಜುಗಳು ಮತ್ತು ಸಂಸ್ಥೆಗಳನ್ನು ಅದರಲ್ಲಿ ನಮೂದಿಸಲಾಗಿದೆ. ಈ ಉಪಬಂಧದ ಸಂಬಂಧದಲ್ಲಿ, ಅಪೀಲುದಾರರಿಗೆ ಸಂಬಂಧ ಪಡುವಷ್ಟರಮಟ್ಟಿಗೆ, ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 (ಕೇಂದ್ರ ಅಧಿನಿಯಮ 1956ರ II) 'ವ್ಯವಹರಿಸುತ್ತಿರುವ' ವಿಷಯಗಳ ಸಂಬಂಧದಲ್ಲಿ ಅಪೀಲುದಾರರಿಗೆ ಕರ್ನಾಟಕ ಶಿಕ್ಷಣ ಅಧಿನಿಯಮವು ಅನ್ವಯವಾಗುವುದಿಲ್ಲ. ಮತ್ತೊಂದು ರೀತಿಯಲ್ಲಿ ಹೇಳುವುದಾರೆ, ಕರ್ನಾಟಕ ಶಿಕ್ಷಣ ಅಧಿನಿಯಮದ 1(3)ನೇ ಪ್ರಕರಣದ iv(ಎ) – (ಎಫ್) ಖಂಡದಲ್ಲಿ ಉಲ್ಲೇಖಿಸಿದ 'ವ್ಯವಹರಿಸುತ್ತಿರುವ' ವಿಷಯಗಳಷ್ಟರ ಮಟ್ಟಿಗೆ ಆ ಕಾಲೇಜುಗಳಿಗೆ ಮತ್ತು ಸಂಸ್ಥೆಗಳಿಗೆ ಕರ್ನಾಟಕ ಶಿಕ್ಷಣ ಅಧಿನಿಯಮವು ಅನ್ವಯವಾಗುವುದಿಲ್ಲ. ಅದು ಹೀಗಿರುವಾಗ, ನಮ್ಮ ಅಭಿಪ್ರಾಯದಲ್ಲಿ, ಎಂದರೆ ಕರ್ನಾಟಕ ಶಿಕ್ಷಣ ಅಧಿನಿಯಮವು ಒಳಗೊಳ್ಳುವ 1(3) ಪ್ರಕರಣದ (iv)(ಎ)–(ಎಫ್) ಖಂಡದಲ್ಲಿ ಉಲ್ಲೇಖಿಸಿದ ಅಧಿನಿಯಮಗಳು 'ವ್ಯವಹರಿಸದಿರುವ' ಆ ಯಾವುದೇ ವಸ್ತುವಿಷಯಕ್ಕೆ ಮಾತ್ರವೇ ಸಂಬಂಧಿಸಿದುದ್ದಾಗಿದೆ.

12. ಶಿಕ್ಷಣ ಅಧಿನಿಯಮದ 94ನೇ ಪ್ರಕರಣವು ಶೈಕ್ಷಣಿಕ ಸಂಸ್ಥೆಗಳ ಉದ್ಯೋಗಿಗಳ ಶಿಸ್ತು ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದ ವಿನಿಯಾಮಕ ಉಪಬಂಧವಾಗಿದೆ. ಆದುದರಿಂದ, ಪ್ರತ್ಯರ್ಜಿದಾರರು ಶಿಕ್ಷಣ ಅಧಿನಿಯಮದ 94ನೇ

ಪ್ರಕರಣದ ಅಡಿಯಲ್ಲಿ ದಾಖಲಿಸಿದ ಅಪೀಲನ್ನು ಊರ್ಜಿತವಾದುದೆಂದು ಹೇಳುವುದಕ್ಕೆ ನಮಗೆ ಯಾವುದೇ ಅನಿಶ್ಚಿತತೆ ಕಂಡು ಬರುತ್ತಿಲ್ಲ.

13. ಭಾರತ ಸಂವಿಧಾನದ 30(1)ನೇ ಅನುಚ್ಛೇದ ಅಡಿಯಲ್ಲಿ ತನ್ನ ಎಲ್ಲ ವ್ಯವಹರಣೆಗಳನ್ನು ನಿರ್ವಹಿಸುತ್ತಿರುವ ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳಿಗೆ ಶಿಕ್ಷಣ ಅಧಿನಿಯಮದ 94ನೇ ಪ್ರಕರಣವು ಅನ್ವಯವಾಗುತ್ತದೆಯೇ? ಎಂಬುದು ನಮ್ಮ ಎದುರುಗಿರುವ ಎರಡನೇ ಪ್ರಮುಖ ಪ್ರಶ್ನೆಯಾಗಿದೆ.

14. ಮೂರನೇ ಅಪೀಲುದಾರ ಕಾಲೇಜು ಒಪ್ಪಿತವಾದಂತೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯಾಗಿದೆ. ಭಾರತ ಸಂವಿಧಾನದ 30ನೇ ಅನುಚ್ಛೇದದ ಅಡಿಯಲ್ಲಿ ಸಂರಕ್ಷಿಸಿದ ಹಕ್ಕುಗಳಿಗೆ ಅಸಂಗತವಾಗುತ್ತದೆ ಎಂಬುವಷ್ಟರ ಮಟ್ಟಿಗೆ ಹೊರತು, ಶಿಕ್ಷಣ ಅಧಿನಿಯಮ ಮತ್ತು ಅದರ ಅಡಿಯಲ್ಲಿ ರಚಿತವಾದ ನಿಯಮಗಳು ಯಾವುದೇ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೆ ಅನ್ವಯವಾಗುವುದಿಲ್ಲ. ಇದನ್ನು ಶಿಕ್ಷಣ ಅಧಿನಿಯಮದ 141ನೇ ಪ್ರಕರಣದ ಅಡಿಯಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತಿಸಲಾಗಿದೆ. 94ನೇ ಪ್ರಕರಣವು ಯಾವುದೇ ಶಿಕ್ಷಣ ಸಂಸ್ಥೆಯ ಯಾರೇ ನೌಕರನನ್ನು ಸೇವೆಯಿಂದ ವಜಾಗೊಳಿಸಿದ್ದರೆ, ತೆಗೆದು ಹಾಕಲ್ಪಟ್ಟಿದ್ದರೆ ಅಥವಾ ದರ್ಜೆಯಿಂದ ಕೆಳಗಿಳಿಸಿದ್ದರೆ. ಆ ನೌಕರನ ಕುಂದು ಕೊರತೆಯ ಪರಿಹಾರಕ್ಕೆ ಮಾತ್ರವೇ ಇದೊಂದು ವಿನಿಯಾಮಕ ಉಪಬಂಧವಾಗಿರುತ್ತದೆ.

15. ಮಾನ್ಯ ಸರ್ವೋಚ್ಚ ನ್ಯಾಯಾಲಯವು ***ಅಹಮದಾಬಾದ್ ಸಂತ ಜೇವಿಯರ್ ಕಾಲೇಜು ಸೊಸೈಟಿ –ವಿರುದ್ಧ– ಗುಜರಾತ್ ರಾಜ್ಯ*** [4] ಮೊಕದ್ದಮೆಯಲ್ಲಿ ಆಡಳಿತದಲ್ಲಿ ಸ್ವಾಯತ್ತತೆ ಎಂದರೆ ಸಂಸ್ಥೆಯ ಪರಿಣಾಮಕಾರಿ ಆಡಳಿತಕ್ಕೆ ಮತ್ತು ನಿರ್ವಹಣೆಗೆ ಮತ್ತು ವ್ಯವಹರಣೆಗಳನ್ನು ನಡೆಸುವುದಕ್ಕೆ ಸಂಸ್ಥೆಗೆ ಇರುವ ಸಂಪೂರ್ಣ ಹಕ್ಕು ಎಂದು ನಿರ್ಣಯಿಸಿದೆ. ಆಡಳಿತ ಹಕ್ಕಿನ ಮೇಲೆ ಇರುವ ನಿರ್ಬಂಧಗಳ ಮತ್ತು ಆಡಳಿತ ವಿಧಾನವನ್ನು ನಿಯಮಿಸಿದ ನಿಬಂಧನೆಗಳ ನಡುವೆ ವಿಶಿಷ್ಟವಾದ ಭಿನ್ನತೆ

4. (1974) 1 ಎಸ್‌ಸಿಸಿ 717

ಇದೆ. ಆಡಳಿತ ಮಂಡಳಿಗೆ ದೈನಂದಿನ ಆಡಳಿತವನ್ನು ನಡೆಸುವುದಕ್ಕೆ ಹಕ್ಕಿದೆ. ಇದರಲ್ಲಿ ಆಡಳಿತ ಸಿಬ್ಬಂದಿಯ ಆಯ್ಕೆಯೂ ಒಳಗೊಂಡಿರುತ್ತದೆ. ವಿಶ್ವವಿದ್ಯಾನಿಲಯವು ಈ ಸಂಸ್ಥೆಗಳಲ್ಲಿ ದುರಾಡಳಿತ ಇಲ್ಲದಿರುವುದನ್ನು ಖಚಿತ ಪಡಿಸುವುದಕ್ಕೆ ಅನನ್ಯವಾದ ಹಕ್ಕು ಹೊಂದಿರುತ್ತದೆ. ದುರಾಡಳಿತವೇನಾದರೂ ಇದ್ದರೆ ವಿಶ್ವವಿದ್ಯಾನಿಲಯವು ಯಾವುದೇ ದುರಾಡಳಿತ ಕೃತ್ಯಕ್ಕೆ ಪರಿಹಾರೋಪಾಯವನ್ನು ತಾನೇ ಚಲಾಯಿಸುವುದಕ್ಕೆ ಅದು ವಿಶಿಷ್ಟಾಧಿಕಾರವನ್ನು ಹೊಂದಿರತಕ್ಕದ್ದು. ವಿಶ್ವವಿದ್ಯಾನಿಲಯವು ಅಲ್ಪಸಂಖ್ಯಾತರ ಅಥವಾ ಬೋಧಕರ ಮತ್ತು ವಿದ್ಯಾರ್ಥಿಗಳ ಅಗತ್ಯತೆಗಳ ಹಿತಾಸಕ್ತಿಗೆ ಧಕ್ಕೆ ಉಂಟಾಗುವ ರೀತಿಯಲ್ಲಿ ಆ ಯಾವುದೇ ಚಟುವಟಿಕೆಗಳಲ್ಲಿ ಅಲ್ಪಸಂಖ್ಯಾತ ಸಂಸ್ಥೆಗಳು ತೊಡಗಿಸಿಕೊಂಡಿರುವುದು ಕಂಡು ಬಂದರೆ ಅಂತಹ ಸಮಯದಲ್ಲಿ ವಿಶ್ವವಿದ್ಯಾನಿಲಯ ಅಲ್ಪಸಂಖ್ಯಾತರ ಸಂಸ್ಥೆಯ ಆಡಳಿತವನ್ನು ನಿಯಂತ್ರಿಸುವ ಮತ್ತು ಪರಿಶೀಲಿಸುವ ಅಧಿಕಾರವನ್ನು ಹೊಂದಿರುತ್ತದೆ. ಆಡಳಿತ ಕ್ಷೇತ್ರದಲ್ಲಿ ಅಲ್ಪಸಂಖ್ಯಾತ ಸಂಸ್ಥೆಗಳು ಪರಮಾಧಿಕಾರ ಮತ್ತು ಮುಕ್ತ ಸ್ವಾಯತ್ತತೆಯನ್ನು ಹೊಂದಿದೆ ಎಂದು ಕ್ಲೇಮು ಮಾಡುವುದು ಮುಕ್ತವಾಗಿರುವುದಿಲ್ಲ ಎಂದು ಅದು ನಿರ್ಣಯಿಸಿದೆ. ಸಂಸ್ಥೆಯು, ಶೈಕ್ಷಣಿಕ ಅಗತ್ಯತೆಯ ಹಿತಕ್ಕೆ ಸಮರ್ಥವಾಗಿ ಮತ್ತು ನ್ಯಾಯ ಸಮ್ಮತವಾಗಿ ಆಡಳಿತ ನಡೆಸುತ್ತಿರುವುದನ್ನು ಖಚಿತ ಪಡಿಸಿಕೊಳ್ಳುವುದಕ್ಕೆ ಅವಶ್ಯಕ ಕ್ರಮದಲ್ಲಿ ಅದರ ಆಡಳಿತವನ್ನು ಪರಿಶೀಲಿಸಬೇಕಾಗುತ್ತದೆ. ಅಲ್ಪಸಂಖ್ಯಾತರ ಆಡಳಿತಕ್ಕೆ ಒಳಪಟ್ಟ ಶಿಕ್ಷಣ ಸಂಸ್ಥೆಗಳಲ್ಲಿ ಒಳ್ಳೆಯ ಆಡಳಿತದ ಕರ್ತವ್ಯವು ಅದರ ಭಾಗವಾಗಿರುವಂತೆ, ಅದು ಪರಸ್ಪರ ಅವಲಂಬನೆಯಾಗಿರುವಂತೆ ಆಡಳಿತ ನಡೆಸುವುದು ಅದರ ಹಕ್ಕಾಗಿದೆ.

16. ***(ಮೇಲಿನ) ಟಿಎಂಎ ಪೈ ಫೌಂಡೇಶನ್*** ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಆಡಳಿತಕ್ಕೆ ಸಂಬಂಧಿಸಿದಂತೆ ಈ ಮುಂದಿನ ಪ್ರಶ್ನೆಯನ್ನು ಎತ್ತಿರುತ್ತದೆ:

> "5(ಸಿ) ಶಿಕ್ಷಣ ಏಜೆನ್ಸಿಗಳ ನಿಯಂತ್ರಣಗಳ ಮೇಲೆ ಆಡಳಿತದ ಅಂಶವನ್ನು ವಿನಿಯಮಿಸಲು, ಆಡಳಿತ ನಿಕಾಯವನ್ನು

ನಿಯಂತ್ರಿಸಲು, ಅದರ ಮಾನ್ಯತೆ/ಮಾನ್ಯತೆಯನ್ನು ಹಿಂದಕ್ಕೆ ಪಡೆಯುವುದು ಸೇರಿದಂತೆ, ಮತ್ತು ಸಿಬ್ಬಂದಿ, ನೌಕರ, ಭೋಧಕರ ಮತ್ತು ಪ್ರಾಂಶುಪಾಲರ ನೇಮಕದ ಸಂಲಗ್ನತೆಯ ನಿಬಂಧನೆಗಳು ಒಳಗೊಂಡಂತೆ ಅವರ ಸೇವಾಷರತ್ತುಗಳು ಒಳಗೊಂಡಂತೆ ಮತ್ತು ಶುಲ್ಕ ಇತ್ಯಾದಿಗಳನ್ನು ವಿನಿಯಮಿಸಲು ರಚಿತವಾದ ಆ ಯಾವುದೇ ಶಾಸನಾತ್ಮಕ ಉಪಬಂಧಗಳು ಇದ್ದಲ್ಲಿ, ಆ ಉಪಬಂಧವು ಅಲ್ಪಸಂಖ್ಯಾತ ಆಡಳಿತದ ಹಕ್ಕಿನಲ್ಲಿ ಹಸ್ತಕ್ಷೇಪ ಮಾಡುತ್ತದೆಯೇ ?"

16.1. ಮೇಲೆ ಎತ್ತಲಾದ ಪ್ರಶ್ನೆಗೆ ಈ ಮುಂದಿನಂತೆ ಉತ್ತರಿಸಲಾಗಿದೆ:

"ಎ. ಶಾಸನಾತ್ಮಕ ಉಪಬಂಧವು ಸಂಬಂಧಪಟ್ಟ ಆಡಳಿತ ಅಂಶಗಳನ್ನು ಸಾಧ್ಯವಾದಷ್ಟು ವಿನಿಯಮಿಸುತ್ತದೆ, ಅನುದಾನ ರಹಿತ ಶಿಕ್ಷಣ ಸಂಸ್ಥೆಯ ಸಂದರ್ಭದಲ್ಲಿ, ಈ ವಿನಿಯಮವು ಅಲ್ಪತಮ ಪ್ರಮಾಣದ ನಿಯಂತ್ರಣವನ್ನು ಮಾತ್ರ ಹೊಂದಿರುತ್ತದೆ ಮತ್ತು ವಿಶ್ವವಿದ್ಯಾಲಯ ಅಥವಾ ಮಂಡಳಿಯ ಸಂಲಗ್ನತೆಯ ಷರತ್ತುಗಳನ್ನು ಅನುಪಾಲಿಸುವಂತೆಯೇ ಮಾನ್ಯತೆಯ ಷರತ್ತುಗಳನ್ನು ಅನುಪಾಲಿಸಬೇಕಾಗುತ್ತದೆ. ಆದರೆ, ಅದು ತನ್ನ ದೈನಂದಿನ ಆಡಳಿತ ನಡೆಸಲು ಸಿಬ್ಬಂದಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕದಂತಹ ಮತ್ತು ಅವರ ಮೇಲೆ ಆಡಳಿತಾತ್ಮಕ ನಿಯಂತ್ರಣದಂತಹ ವಿಷಯದಲ್ಲಿ ಅನುದಾನರಹಿತ ಅಲ್ಪಸಂಖ್ಯಾತ ಆಡಳಿತ ಮಂಡಳಿಯೂ ಸಂಪೂರ್ಣ ಸ್ವಾತಂತ್ರವನ್ನು ಹೊಂದಿರತಕ್ಕದ್ದು ಮತ್ತು ಅದು ಯಾವುದೇ ಬಾಹ್ಯ ನಿಯಂತ್ರಣ ಏಜೆನ್ಸಿಯನ್ನು ಹೊಂದಿರುವುದಿಲ್ಲ. ಆದುದರಿಂದ ಅನುದಾನರಹಿತ ಅಲ್ಪಸಂಖ್ಯಾತ ಆಡಳಿತ ಮಂಡಳಿಯು ತನ್ನ ಬೋಧನಾ ಸಿಬ್ಬಂದಿಯನ್ನು ಆಯ್ಕೆ

ಮಾಡಿಕೊಳ್ಳುವ ಮತ್ತು ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಕಾರ್ಯವಿಧಾನವು ಸ್ವತಃ ಅದರ ವಿವೇಚನೆಗೆ ಸೇರಿರುತ್ತದೆ.

ಅನುದಾನಿತ ಮತ್ತು ಅನುದಾನರಹಿತ ಸಂಸ್ಥೆಗಳ ನೌಕರರ ದಂಡನೆ ಮತ್ತು ಅವರ ಸೇವೆಗಳಿಂದ ವಜಾಗೊಳಿಸಿದ ಮತ್ತು ವಿಷಯಕ್ಕೆ ಸಂಬಂಧಪಟ್ಟಂತೆ ಅವರ ಕುಂದುಕೊರತೆಗಳ ಪರಿಹಾರೋಪಾಯಕ್ಕಾಗಿ, ಒಂದು ಕಾರ್ಯವ್ಯವಸ್ಥೆಯನ್ನು ರೂಪಿಸಬೇಕಾಗುತ್ತದೆ ಮತ್ತು ನಮ್ಮ ಅಭಿಪ್ರಾಯದಲ್ಲಿ, ಸಮುಚಿತ ನ್ಯಾಯಾಧಿಕರಣವನ್ನು ರಚಿಸಬೇಕಾಗುತ್ತದೆ ಮತ್ತು ಅಂಥ ನ್ಯಾಯಾಧಿಕರಣ ರಚಿತವಾಗುವವರೆಗೂ ಜಿಲ್ಲಾ ನ್ಯಾಯಾಧೀಶರ ದರ್ಜೆಯ ನ್ಯಾಯಿಕ ಅಧಿಕಾರಿಯೊಬ್ಬರು ಅದರ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳುವುದು.

ರಾಜ್ಯ ಅಥವಾ ಇತರ ನಿಯಂತ್ರಣ ಪ್ರಾಧಿಕಾರಗಳು, ಯಾವುದೇ ಶಿಕ್ಷಣ ಸಂಸ್ಥೆಯ ಬೋಧಕರನ್ನು ಅಥವಾ ಪ್ರಾಂಶುಪಾಲರನ್ನು ನೇಮಕ ಮಾಡಿಕೊಳ್ಳುವ ಸಂಬಂಧದಲ್ಲಿ ಕನಿಷ್ಠ ವಿದ್ಯಾರ್ಹತೆ, ಅನುಭವ ಮತ್ತು ವೈಯಕ್ತಿಕವಾಗಿ ಪಡೆದುಕೊಂಡ ಅರ್ಹತೆ, ಇತರ ಷರತ್ತುಗಳನ್ನು ನಿಯಮಿತವಾಗಿ ನಿಯಮಿಸುತ್ತಿರಬೇಕಾಗುತ್ತದೆ.

(ನಮ್ಮಿಂದ ಒತ್ತು ನೀಡಲಾಗಿದೆ.)

17. ಮಾನ್ಯ ಸರ್ವೋಚ್ಚ ನ್ಯಾಯಾಲಯವು, ***ಕಾರ್ಯದರ್ಶಿ, ಮಾಲಂಕರ ಸಿರಿಯನ್ ಕ್ಯಾಥೋಲಿಕ್ ಕಾಲೇಜು -ವಿರುದ್ಧ- ಟಿ. ಜೋಶಿ ಮತ್ತು ಇತರರು*** [5] ಮೊಕದ್ದಮೆಯಲ್ಲಿ ರಾಜ್ಯದಿಂದ ಅನುದಾನವನ್ನು ಸ್ವೀಕರಿಸುತ್ತಿರುವ ಅಂಥ ಯಾವುದೇ ಸಂಸ್ಥೆಗಳು ಇರುವಾಗ, ಅಂಥ ಶಿಕ್ಷಣ ಸಂಸ್ಥೆಗಳು ಆಡಳಿತವನ್ನು ಅಲ್ಪಸಂಖ್ಯಾತರು

5. ಎಐಆರ್ 2007, ಎಸ್‌ಸಿ 570

ನಡೆಸುತ್ತಿರುವಾಗ ಅವರ ಹಕ್ಕನ್ನು ರಾಜ್ಯವು ವ್ಯಾಪಕವಾಗಿ ವಿನಿಯಮಿಸುವುದಕ್ಕೆ ಅಧಿಕಾರವನ್ನು ಹೊಂದಿದೆ ಎಂಬ ಅಂಶವನ್ನು ಪರಿಗಣಿಸಿರುತ್ತದೆ. ***ಟಿಎಂಎ ಪೈ ಫೌಂಡೇಷನ್*** (ಮೇಲಿನ) ಮೊಕದ್ದಮೆ ಒಳಗೊಂಡಂತೆ ಸರ್ವೋಚ್ಚ ನ್ಯಾಯಾಲಯದ ವಿವಿಧ ನಿರ್ಣಯಗಳನ್ನು ಪರಿಗಣಿಸಿದ ತರುವಾಯ, ಈ ನ್ಯಾಯಾಲಯ ಈ ಕೆಳಗಿನ ನಿರ್ಣಯಕ್ಕೆ ಬಂದಿರುತ್ತದೆ:

> "ಅನುದಾನಿತ ಸಂಸ್ಥೆಗಳು ಲೌಕಿಕ ಶಿಕ್ಷಣ ಅಥವಾ ವೃತ್ತಿಪರ ಶಿಕ್ಷಣ ನೀಡುವುದಕ್ಕೆ ಮಾತ್ರವೇ ಸೂಚಿಸಲಾಗಿರುತ್ತದೆ. ರಾಜ್ಯದ ನಿಧಿಯನ್ನು ಪಡೆದು ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಪ್ರತಿಷೇಧಿಸಿದೆ. ಆ ಅನುದಾನಿತ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಅಲ್ಪಸಂಖ್ಯಾತೇತರ ಶಿಕ್ಷಣ ಸಂಸ್ಥೆಗಳು ನೀಡುತ್ತಿರುವ ಮಾನದಂಡ ಶಿಕ್ಷಣದಂತಹ ರೀತಿಯಲ್ಲಿಯೇ ಈ ಅನುದಾನಿತ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಲೌಕಿಕ ಶಿಕ್ಷಣವನ್ನು ಅಥವಾ ವೃತ್ತಿಪರ ಶಿಕ್ಷಣವು ಅವಶ್ಯವಾಗಿ ನೀಡಬೇಕಾಗುತ್ತದೆ. ಅಂಥ ಮಾನದಂಡದ ಶಿಕ್ಷಣವನ್ನು ನೀಡಬೇಕೆಂದರೆ, ಅದಕ್ಕೆ ಯುಕ್ತ ವಿದ್ಯಾರ್ಹತೆ ಹೊಂದಿರುವ ವೃತ್ತಿಪರ ಬೋಧಕರಿಂದ ಮಾತ್ರ ಸಾಧ್ಯವಾಗುತ್ತದೆ. ಆದಾಗ್ಯೂ, ಶಿಕ್ಷಣದ ಮಾನದಂಡಗಳನ್ನು ನಿರ್ವಹಿಸುವ ಸಲುವಾಗಿ ಸಂಸ್ಥೆಯೂ ಉತ್ತಮ ವಿದ್ಯಾರ್ಹತೆ ಹೊಂದಿರುವ ವೃತ್ತಿಪರ ಬೋಧಕರನ್ನು ಹೊಂದುವುದು ಅವಶ್ಯವಾಗಿದೆ ಹಾಗೂ ಅಂತಹ ವೃತ್ತಿಪರ ಬೋಧಕರನ್ನು ಹೊಂದುವುದಕ್ಕೆ ಅದು ಅಂಥ ವೃತ್ತಿಪರ ಬೋಧಕರಿಗೆ ಸೇವಾ ಭದ್ರತೆಯನ್ನು ಸುನಿಶ್ಚಿತ ಪಡಿಸಿದಾಗ, ಅವರ ಸೇವೆಯಲ್ಲಿ ತೃಪ್ತಿ ವ್ಯಕ್ತಪಡಿಸಿದಾಗ ಮಾತ್ರವೇ ಸಂಸ್ಥೆಯು ಮಾನದಂಡದ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ. ಆದುದರಿಂದ, ರಾಜ್ಯವು ಗುಣಮಟ್ಟದ ಶಿಕ್ಷಣವನ್ನು ಖಚಿತಪಡಿಸುವುದಕ್ಕೆ ಅಲ್ಪಸಂಖ್ಯಾತ

ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ನಿಬಂಧನೆಗಳನ್ನು ವಿನಿಯಮಿಸಬೇಕಾಗುತ್ತದೆ. ತತ್ಪರಿಣಾಮವಾಗಿ, ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಷರತ್ತುಗಳನ್ನು ಉದ್ದೇಶಿಸಿ ವಿನಿಯಮಿಸಿದ ಯಾವುದೇ ಕಾನೂನು ಈ ಅಲ್ಪಸಂಖ್ಯಾತ ಸಂಸ್ಥೆಗಳಿಗೂ ಸಹ ಅನ್ವಯವಾಗುತ್ತದೆ. ಪರಂತು, ಅಂಥ ಕಾನೂನು ಅಲ್ಪಸಂಖ್ಯಾತ ಸಂಸ್ಥೆಯ ಆಡಳಿತ ಮಂಡಳಿಯ ಮೇಲೆ ಅದರ ಎಲ್ಲ ಸಿಬ್ಬಂದಿಯ ಮೇಲಿನ ನಿಯಂತ್ರಣದಲ್ಲಿ ಹಸ್ತಕ್ಷೇಪ ಮಾಡಬಾರದು.”

(ನಮ್ಮಿಂದ ಒತ್ತು ನೀಡಲಾಗಿದೆ)

18. ನ್ಯಾಯಾಲಯವು ಮುಂದುವರೆದು, ಸರ್ಕಾರದಿಂದ ಅನುದಾನ ಪಡೆಯುವ ಶಿಕ್ಷಣ ಸಂಸ್ಥೆಗಳ ಆಡಳಿತವನ್ನು ವಿನಿಯಮಿಸುವುದಕ್ಕೆ ರಾಜ್ಯವು ರಚಿಸುವ ಎಲ್ಲ ಕಾನೂನುಗಳು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೂ ಸಹ ಅನ್ವಯವಾಗತಕ್ಕದ್ದು. ಆದರೆ ಆಡಳಿತ ಮಂಡಳಿಯ ಆಡಳಿತ ನಿಯಂತ್ರಣವನ್ನು, ಎಲ್ಲ ಸಿಬ್ಬಂದಿಯ ಮೇಲಿನ ನಿರ್ವಹಣೆಯಲ್ಲಿ ಅಥವಾ ಆಡಳಿತ ಮಂಡಳಿಯ ನಿಯಂತ್ರಣವನ್ನು ಯಾವುದೇ ಇತರ ರೀತಿಯಲ್ಲಿ ಸಂಕ್ಷೇಪಿಸುವ/ದುರ್ಬಲಗೊಳಿಸುವ ರೀತಿಯಲ್ಲಿ ಸರ್ಕಾರವು ವಿನಿಯಮಿಸಿದ ಕಾನೂನು ಹಸ್ತಕ್ಷೇಪ ಮಾಡಿದರೆ, ಅಂಥ ವಿನಿಯಮಗಳನ್ನು ಅಲ್ಪಸಂಖ್ಯಾತರ ಸಂಸ್ಥೆಯು ಶಿಕ್ಷಣ ಸಂಸ್ಥೆಯನ್ನು ವ್ಯವಸ್ಥೆಗೊಳಿಸುವುದಕ್ಕೆ ಮತ್ತು ಆಡಳಿತ ನಡೆಸುವುದಕ್ಕೆ ಇರುವ ಹಕ್ಕಿಗೆ ಹಸ್ತಕ್ಷೇಪವಾಗುವುದರಿಂದ ಅದು ಅಂಥ ವಿನಿಯಮನವನ್ನು ವ್ಯಾಪಕವಾಗಿ ಅನ್ವಯಿಸಿಕೊಳ್ಳಬಾರದೆಂಬುದು ನ್ಯಾಯಾಲಯದ ನಿರ್ಣಯವಾಗಿದೆ.

19. ಮೇಲಿನ ಚರ್ಚೆಯಿಂದ ರಾಜ್ಯವೇ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ನೌಕರ ಸೇವಾ ಷರತ್ತುಗಳನ್ನು ವಿನಿಯಮಿಸಬೇಕಾಗಿರುವುದು ಸ್ಪಷ್ಟವಾಗಿದೆ. ಅಂಥ ವಿನಿಯಮನಗಳು ಸಾಧ್ಯವಾದಷ್ಟು ಶಿಕ್ಷಣ ಸಂಸ್ಥೆಗಳ ವ್ಯವಸ್ಥೆಗೆ ಮತ್ತು ಆಡಳಿತದ ಹಕ್ಕಿಗೆ ಯಾವುದೇ ರೀತಿಯಲ್ಲಿ ಅದರ ಆಡಳಿತಾತ್ಮಕ ನಿಯಂತ್ರಣಕ್ಕೆ, ಎಲ್ಲಾ

ಸಿಬ್ಬಂದಿಯ ಮೇಲಿನ ನಿರ್ವಹಣೆಯಲ್ಲಿ ಅಥವಾ ಆಡಳಿತ ಮಂಡಳಿಯ ನಿಯಂತ್ರಣವನ್ನು ಸಂಕ್ಷೇಪಿಸುವ/ದುರ್ಬಲಗೊಳಿಸುವಂತಹ ಹಸ್ತಕ್ಷೇಪವನ್ನು ಮಾಡಬಾರದು. ಆದುದರಿಂದ, ಸೇವಾ ಷರತ್ತುಗಳನ್ನು ವಿನಿಯಮಿಸುವುದಕ್ಕೆ ಉದ್ದೇಶಿಸಿ ರಚಿಸಿದ ಯಾವುದೇ ಕಾನೂನು, ನೌಕರನ ಕುಂದುಕೊರತೆಯ ಪರಿಹಾರೋಪಾಯಕ್ಕಾಗಿ ಅಂಥ ಅಪೀಲನ್ನು ದಾಖಲಿಸುವುದಕ್ಕಾಗಿನ ಉಪಬಂಧವು ಭಾರತ ಸಂವಿಧಾನದ 30(1)ನೇ ಅನುಚ್ಛೇದದ ಅಡಿಯಲ್ಲಿ ಸ್ಥಾಪಿತವಾಗಿರುವ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ವ್ಯವಸ್ಥೆ ಮತ್ತು ಆಡಳಿತ ನಿರ್ವಹಣೆಯ ಹಕ್ಕಿಗೆ ಧಕ್ಕೆ ಉಂಟು ಮಾಡಿದಂತಾಗುತ್ತದೆಯೆಂದು ಭಾವಿಸುವುದು ಅಸಂಗತವಾಗುತ್ತದೆ.

20. ಪರಿಣಾಮವಾಗಿ, ತನ್ನ ನೌಕರರ ಸೇವಾ ಷರತ್ತುಗಳನ್ನು ವಿನಿಯಮಿಸಲು ಶಿಕ್ಷಣ ಅಧಿನಿಯಮವು ಅನ್ವಯವಾಗದು ಎಂಬ ಅಪೀಲುದಾರರ ಅಲ್ಪಸಂಖ್ಯಾತ ಸಂಸ್ಥೆಯ ಪರವಾಗಿನ ವಾದಾಂಶದಲ್ಲಿ ಯಾವುದೇ ಗುಣಾರ್ಹತೆ ಇರುವುದಿಲ್ಲ. ತತ್ಪರಿಣಾಮವಾಗಿ, ಅಪೀಲು ವಿಫಲವಾಗಿದೆ ಮತ್ತು ತದನುಸಾರವಾಗಿ ಅದನ್ನು ವಜಾ ಮಾಡಲಾಗಿದೆ. ಯಾವುದೇ ವೆಚ್ಚ ಇರುವುದಿಲ್ಲ.